ಮಾಡಲಾಗುವುದು. ಅದೇ ರೀತಿಯಲ್ಲಿ ಹರಪನಹಳ್ಳಿಯಲ್ಲಿಯೂ ಕೂಡ ಆಧ್ಯತೆಯ ಮೇಲೆ ಠಾಣೆಯನ್ನು ಮಾಡಿಂವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಯಂಕಾ ನಾಯಕ್.—ಈಗ ಹರಪನಹಳ್ಳಿ ಮತ್ತು ಹೊಸಪೇಟೆಗೆ ಎಷ್ಟು ದೂರ ವಾಗುತ್ತಿದೆ ಎಂದು ನೋಡಬೇಕು. ಸುಮಾರು ೭೦–೮೦ ಕಿ.ಮೀಟರ್ ದೂರದಿಂದ ಇಂತಹ ಆಪಘಾತ ಗಳು ಆದಾಗ ಅಗ್ನಿಶಾಮಕ ಯಂತ್ರ ಬರುವುದರೊಳಗಾಗಿ ಆ ಪ್ರದೇಶದಲ್ಲಿರುವ ಸುಮಾರು ೬೦–೭೦ ತಾಂಡಾಗಳು ಹರಿಜನರ ಗುಡಿಸಲುಗಳು ಎಲ್ಲವೂ ನಾಶವಾಗುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡು, ಹರಪನ ಹಳ್ಳಿ, ಹಡಗಲಿ, ಕೂಡ್ಲಿಗಿ, ತಾಲ್ಲೂಕುಗಳಲ್ಲಿ ಉಪ–ಅಗ್ನಿಶಾಮಕ ಠಾಣೆಯನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ವೀರಣ್ಣ.—ಅಧ್ಯಕ್ಷರೇ, ಈ ಅಗ್ನಿಶಾಮಕ ಘಟಕಗಳನ್ನು ಸ್ಥಾಪಿಸಲು ಎಷ್ಟು ಖರ್ಚಾ ಗುತ್ತದೆಂದು ಹೇಳಿದ್ದೇನೆ. ಹಣದ ಅವಶ್ಯಕತೆ ನೋಡಿಕೊಂಡು ಮುಂದಿನ ಕ್ರಮವನ್ನು ತೆಗೆದು ಕೊಳ್ಳಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಘಟಕಗಳನ್ನು ಕೆಲವು ಇಂಪಾರ್ಟೆಂಟ್ ಪ್ಲೇಸ್‌ಗಳಲ್ಲಾ ದರೂ ನೀವು ಮಾಡಬೇಕು. ಏಕೆಂದರೆ ಗುಲ್ಬರ್ಗದಿಂದ ಯಾದಗಿರಿಗೆ ೧೩೦ ಕಿ.ಮೀ. ಆಂತರವಿದ್ದ, ಯಾದಗೀರ್ ಶೇಂಗಾ ಮತ್ತು ಕಾಟನ್ ವ್ಯಾಪಾರಿ ಸ್ಥಳವಾಗಿದ್ದು ಅಲ್ಲಿ ತಂತ್ರ ಅವಶ್ಯಕತೆ ಬಂದಾಗ ಟೆಲಿಫೋನ್ ಮಾಡಿ ಗಲ್ಬರ್ಗದಿಂದ ದಳ ಕರೆಯಿಸಿಕೊಳ್ಳಲು ಕನಿಷ್ಟ ೩ ಗಂಟೆ ಸಮಯ ಬೇಕಾಗುತ್ತದೆ. ಆದ್ದರಿಂದ ಕೊನೆಯ ಪಕ್ಷ ಸಬ್ ಡಿವಿಜನ್ ಮಟ್ಟದಲ್ಲಾದರೂ ಈ ಘಟಕಗಳನ್ನು ತಾವು ತೆರೆಯ ಬೇಕು.

ಶ್ರೀ ವೀರಣ್ಣ.—ಮಾನ್ಯ ಖಾರ್ಗೆಯವರ ಸೂಚನೆ ಒಳ್ಳೆಯದು. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲ ತೆರೆಯಬೇಕೆಂಬುದು ಸರ್ಕಾರದ ನೀತಿ ಆಗಿದೆ. ಸದಸ್ಯರು ಹೇಳಿದ ಕಡೆ ಆದ್ಯತೆ ಮೇರೆಗೆ ತೆರೆಯಲು ಪ್ರಯತ್ನ ಮಾಡುತ್ತೇವೆ.

ಸಚಿವರ ದೂರವಾಣಿ ವೆಚ್ಚ

೧೬೦೫. ಬಾಬು ರೆಡ್ಡಿ ಎ. ತುಂಗಳ್ (ಬೀಳಗಿ).—ಮಾನ್ಯ ಮಂಖ್ಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗ್ಕೆದಯವಿಟ್ಟು ಉತ್ತರಿಸುವರೇ ?

ಅ) ಸಚಿವರ ಸಂಪುಟದ ಎಷ್ಟು ಸಚಿವರಿಗೆ ಅವರ ಕಛೇರಿ ಹಾಗೂ ನಿವಾಸಗಳಿಗೆ ಸರ್ಕಾರದ ವತಿಯಿಂದ ದೂರವಾಣಿ ಒದಗಿಸಲಾಗಿದೆ ?

ಆ) ೧೯೮೭ರ ಮಾರ್ಚ್‌ದಿಂದ ೧೯೮೮ರ ಮಾರ್ಚ್‌ದವರೆಗೆ ಮುಖ್ಯ ಮಂತ್ರಿಗಳನ್ನೊಳಗೊಂಡು ಎಲ್ಲ ಮಂತ್ರಿಗಳ ಕಛೇರಿ ಹಾಗೂ ನಿವಾಸಗಳಿಗೆ ದೂರವಾಣಿಯ ವೆಚ್ಚವೆಷ್ಟು ? (ಪ್ರತ್ಯೇಕ ವಿವರ ಒದಗಿಸುವುದು)

ಇ) ಈ ದೂರವಾಣಿ ಖರ್ಚಿನಲ್ಲಿ ಮಿತವ್ಯಯ ಸಾಧಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಸಚಿವರ ಸಂಪುಟದ ೨೭ ಸಚಿವರ ಕಛೇರಿಗೆ ದೂರವಾಣಿಯನ್ನು ಒದಗಿಸಲಾಗಿದೆ ಹಾಗೂ ೩೬ ಸಚಿವರ ನಿವಾಸಗಳಿಗೆ ಸರ್ಕಾರದ ವತಿಯಿಂದ ದೂರವಾಣಿ ಒದಗಿಸಲಾಗಿದೆ.

ಆ) ದೂರವಾಣಿಯ ಒಟ್ಟು ವೆಚ್ಚ :

ಕಛೇರಿ	...	ರೂ. ೨೭,೨೮,೭೯೨–೦೦
ನಿವಾಸ	...	ರೂ. ೨೦,೭೬,೬೧೩–೦೦

(ವಿವರಗಳನ್ನು ಲಗತ್ತಿಸಿದ ತ.ಪ್ರತಿಯಲ್ಲಿ ಒದಗಿಸಿದೆ)

ಇ) ಹೌದು.

ಸಚಿವರ ರಾಜ್ಯ ಸಚಿವರ ದೂರವಾಣಿ ವೆಚ್ಚಗಳ ವಿವರಣಾ ಪಟ್ಟಿ
(ಮಾರ್ಚಿ ೧೯೮೭ ರಿಂದ ಮಾರ್ಚ್ ೧೯೮೮ರ ವರೆಗೆ)

ಅ. ಸಂಖ್ಯೆ	ಸಚಿವರ ಹೆಸರು	ಖಾತೆ	ಕಛೇರಿ	ನಿವಾಸ
೧	೨	೩	೪	೫
	ಶ್ರೀಯುತ			
೧	ರಾಮಕೃಷ್ಣ ಹೆಗಡೆ	ಮಂಂಖ್ಯೆ ಮಂತ್ರಿ	೧,೬೭,೧೩೭-೦೦	೧,೩೨,೮೧೮-೦೦
೨	ಬಿ. ರಾಚಯ್ಯ	ಆರೋಗ್ಯ ಸಚಿವರು	೫೯,೩೪೭-೦೦	೫೪,೦೫೬-೦೦
೩	ಅಬ್ದುಲ್ ನಜೀರ್ ಸಾಬ್	ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಸಚಿವರು	೨,೦೧,೯೩೬-೦೦	೧,೦೨,೩೨೬-೦೨
೪	ಎಸ್. ಆರ್. ಬೊಮ್ಮಾಯಿ	ಕಂದಾಯ ಮತ್ತು ಯೋಜನಾ ಸಚಿವರು	೮೧,೪೫೩-೦೦	೧,೩೭,೫೩೫-೦೦
೫	ಪೆಚ್. ತಿ. ಬೇವೇಗೌಡ	ಲೋಕೋಪಯೋಗಿ ಮತ್ತು ನೀರಾವರಿ ಸಚಿವರು	೮೩,೯೫೦-೦೦	೧,೫೦,೧೪೯-೨೦
೬	ಜೆ. ಹೆಚ್. ಪಟೇಲ್	ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಸಚಿವರು	೯೫,೪೬೨-೦೦	೧,೫೭,೮೭೩-೦೦
೭	ಎ. ಲಕ್ಷ್ಮೀಸಾಗರ್	ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು	೨೧,೨೩೭-೦೦	೩,೫೮೮-೦೦
೮	ಆರ್. ಎಲ್. ಜಾಲಪ್ಪ	ಗೃಹ ಸಚಿವರು	೪೧,೨೭೯-೦೦	೩೮,೨೧೧-೦೦
೯	ಜಿ. ಪರಮಣ್ಣಪ್ಪ	ಸಮಾಜ ಕಲ್ಯಾಣ ಸಚಿವರು	೧,೮೭,೯೮೮-೨೦	೪೯,೬೦೪-೦೦
೧೦	ಎಂ. ಚಂದ್ರಶೇಖರ್	ನಗರಾಭಿವೃದ್ಧಿ ಸಚಿವರು	೪೯,೫೬೧-೦೦	೨೬,೩೩೪-೦೦
೧೧	ಆರ್. ಬಿ. ಪೋತದಾರ್	ಕೈಗಾರಿಕಾ ಸಹಕಾರಗಳ ಸಚಿವರು	೬೫,೫೨೮-೦೦	೧,೭೦೯-೦೦
೧೨	ಎಂ. ರಘುಪತಿ	ಬಂದರು ಮತ್ತು ವಿಾನುಗಾರಿಕೆ ಸಚಿವರು	೭೪,೧೦೦-೦೦	೧,೩೦,೨೧೫-೦೦
೧೩	ಎಂ. ಪಿ. ಪ್ರಕಾಶ್	ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು	೪೭,೪೮೩-೨೦	೪೫,೯೯-೦೦
೧೪	ಡಾ. ಜೀವರಾಜ್ ಆಳ್ವ	ಉನ್ನತ ಶಿಕ್ಷಣ ಸಚಿವರು	೬೦,೫೯೨-೦೦	೪೨,೩೪೬-೦೦
೧೫	ಪಿ. ಜಿ. ಆರ್ ಸಿಂಧ್ಯ	ಸಾರಿಗೆ ಮಂತ್ರಿಗಳು	೯೯,೨೧೯-೦೦	೪೬ ೫೭೩-೨೦
೧೬	ಆರ್. ವಿ. ದೇಶಪಾಂಡೆ	ಕೃಷಿ ಸಚಿವರು	೬೩,೧೩೩-೦೦	೬೪,೯೭೮-೦೦
೧೭	ಬಿ. ಎ. ಜೀವಿಜಯ	ಸಣ್ಣ ಕೈಗಾರಿಕೆಗಳ ಸಚಿವರು	೬೮,೮೭೮-೦೦	೬೪,೭೦೪-೦೦

೧೮	ಸಿದ್ದರಾಮಯ್ಯ	ಪಶುಸಂಗೋಪನಾ ಸಚಿವರು	೫೩,೪೧೩-೦೦	೧,೦೨,೩೪೧-೦೦
೧೯	ಕೆ. ಎಂ ಮುನಿಯಪ್ಪ	ರೇಷ್ಮೆ ಸಚಿವರು	೬೯,೭೪೭-೦೦	೨೯,೫೯೯-೦೦
೨೦	ಎಸ್. ಕೆ. ಕಾಂತ	ಕಾರ್ಮಿಕ ಸಚಿವರು	೯೧,೪೮೨-೦೦	೭೪,೭೭೩-೨೦
೨೧	ಹೆಚ್. ಏಕಾಂತಯ್ಯ	ಸಹಕಾರ ಮಂತ್ರಿಗಳು	೫೬,೨೦೩-೦೦	೫,೭೯೮-೦೦
೨೨	ಸಿ. ವೀರಣ್ಣ	ಹಣಕಾಸು, ಸಣ್ಣ ಉಳಿತಾಯ ಮತ್ತು ಬಂದೀಖಾನೆಗಳ ರಾಜ್ಯ ಸಚಿವರು	೫೪೪,೭೭೭-೦೦	೨೪,೭೧೫-೦೦
೨೩	ಬಸಪ್ಪರಾಜ್ ಪಾಟೀಲ್ ಅನ್ವರಿ	ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು	೧,೨೯,೩೭೨-೦೦	೮೫,೬೧೧-೨೦
೨೪	ಆರ್. ಸಿ. ಜಿಗಜಿಣಗಿ	ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿ	೭೨,೧೫೪-೦೦	೧,೧೮,೧೦೦-೦೦
೨೫	ಡಿ. ಬಿ. ಇನಾಂದಾರ್	ಅಬ್ಕಾರಿ ರಾಜ್ಯ ಮಂತ್ರಿ	೫೯,೫೪೭-೦೦	೮೩,೭೨೨-೦೦
೨೬	ಕೆ. ಬಿ. ಮಲ್ಲಪ್ಪ	ನಿಯಂತ್ರಿತ ಪಡಿತರ ಚೀಟಿ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿ	೬೯,೫೯೯-೦೦	೯,೩೮೮-೦೦
೨೭	ಜಿ. ಎಸ್. ಬಾಗಲಕೋಟ್	ಅರಣ್ಯ ರಾಜ್ಯ ಮಂತ್ರಿ	೮೪,೩೨೧-೦೦	೨೮,೮೦೨-೦೦
೨೮	ವೈ. ಕೆ. ರಾಮಯ್ಯ	ತೋಟಗಾರಿಕೆ ರಾಜ್ಯ ಮಂತ್ರಿ	೪೩,೩೨೧-೦೦	೩೭,೧೧೭-೦೦
೨೯	ಲಕ್ಷ್ಮಿನರಸಿಂಹಯ್ಯ	ವಿದ್ಯುತ್ ರಾಜ್ಯ ಮಂತ್ರಿ	೪೧,೯೬೪-೦೦	...
೩೦	ಕೆ. ಅಮರನಾಥ ಶೆಟ್ಟಿ	ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿ	೯೮,೧೭೫-೦೦	೪೭,೯೯೦-೦೦
೩೧	ಬಿ. ಸೋಮಶೇಖರ್	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿ	೩೯,೧೫೩-೨೦	೧೦,೮೩೧-೦೦
೩೨	ಬಿ. ಎಲ್. ಶಂಕರ್	ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿ	೯೯,೨೮೮-೦೦	೨೩,೭೫೨-೦೦
೩೩	ಕೆ. ಕೃಷ್ಣಮೂರ್ತಿ	ಸಣ್ಣ ನೀರಾವರಿ ಮತ್ತು ಪಶು ಸೀರಾಪರಿ ರಾಜ್ಯ ಮಂತ್ರಿ	೫೫,೯೩೨-೦೦	೯೫,೦೧೨-೨೦
೩೪	ಮಹಮದ್ ಮೊಯಿನುದ್ದೀನ್	ವಸತಿ ರಾಜ್ಯ ಮಂತ್ರಿ	೬೫,೭೩೧-೦೦	೨೧,೪೮೪-೦೦
೩೫	ಶ್ರೀಮತಿ ಶಿವಕಾಂತ ಚತುರೆ	ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಮಂತ್ರಿ	೯೫,೯೦೧-೦೦	೨೮,೬೯೪-೦೦
			೨೭,೨೮,೨೯೨-೦೦	೨೦,೭೬,೬೧೩-೦೦

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರುವ ಅಂಕಿ ಅಂಶಗಳ ತಃಖ್ತೆ ನೋಡಿದೆ. ಇದರಲ್ಲಿ ಒಂದೆಂದರೆ ಸಾಮಾನ್ಯವಾಗಿ ಕಛೇರಿ ಬಾಬ್ತು ಜಾಸ್ತಿ ಇದ್ದು ನಿವಾಸದ ಬಾಬ್ತು ಕಡಿಮೆ ಇರಬೇಕಾಗಿತ್ತು. ಆದರೆ ಇಲ್ಲಿ ಎರಡೂ ಹೆಚ್ಚೂ ಕಡಿಮೆ ಸರಿಸಮಾನವಾಗಿದೆ. ಹೆಗಡೆಯವರಿಗಿಂತ ಅಪರ ಸಂಪುಟದ ಇನ್ನೊಬ್ಬ ಹಿರಿಯ ಸಚಿವರ ಬಿಲ್ ಜಾಸ್ತಿ ಆಗಿದೆ, ನಾನು ಕೇಳುವುದೇನೆಂದರೆ ಮಹತ್ವದ ಖಾತೆಗಳ ಸಚಿವರ ಬಾಬ್ತು ಬೇಕಾದರೆ ಹೆಚ್ಚಾಗಲಿ, ಆದರೆ ಮಹತ್ವವಲ್ಲದ ಉದಾಹರಣೆಗೆ ಫೈಲುಗಳನ್ನೇ ನೋಡದ ಶ್ರೀಮತಿ ಶಿವಕಾಂತ ಚಿತಂರೆಯವರ ಬಾಬ್ತು ೯೫ ಸಾವಿರಕ್ಕೇರಿದೆ. ಇದು ಏಕೆ ? ಆದ್ದರಿಂದ ಒಂದು ಸುತ್ತೋಲೆ ಹೊರಡಿಸಿ ಆದಷ್ಟೂ ಮಿತವ್ಯಯ ಸಾಧಿಸಲು ಮುಖ್ಯ ಮಂತ್ರಿಗಳು ಸಚಿವರನ್ನು ಕೋರುವರೆ ?

ಶ್ರೀ ರಾಮಕೃಷ್ಣ ಹೆಗಡೆ.— ರೂಲ್ ಪ್ರಕಾರ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳ ನಿವಾಸಕ್ಕೆ ಎರಡು ಫೋನ್ ನೀಡಬಹುದಾಗಿದ್ದರೂ ಮಿತವ್ಯಯದ ದೃಷ್ಟಿಯಿಂದ ಕೇವಲ ಒಬ್ಬರಿಗೆ ಮಾತ್ರ ಈ ಸೌಲಭ್ಯ ಇದೆ. ಖರ್ಚು ಹೆಚ್ಚಾಗಲು ಮುಖ್ಯವಾದ ಕಾರಣವೆಂದರೆ ಟೆಲಿಫೋನ್ ಚಾರ್ಜಸ್ ಜಾಸ್ತಿಯಾಗಿರುವುದು. ಹಿಂದೆ ಒಂದು ಲೋಕಲ್ ಕಾಲ್‌ಗೆ ೧೦ ಪೈಸೆ ಇದ್ದದ್ದು ಈಗ ೧ ರೂಪಾಯಿಗೆ ಏರಿದೆ. ಇದು ಮುಖ್ಯವಾದಂತಹ ಕಾರಣ. ಚಾರ್ಜಸ್ ಹೆಚ್ಚಾಗಿರುವುದರಿಂದ ಈ ರೀತಿಯಾಗಿದೆ. ಆದರೂ ಇನ್ನೂ ಕಡಿಮೆ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

೧೨-೦೦ ಮಧ್ಯಾಹ್ನ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ತಾವು ವಿಷಯವನ್ನು ಡೈವರ್ಟ್ ಮಾಡಬೇಡಿ. ಮಹತ್ವವಿರತಕ್ಕಂತಹ ಖಾತೆಗಳ ಮಂತ್ರಿಗಳು ಇರಲಿ, ಕೆಲವು ಮಂತ್ರಿಗಳ ಖಾತೆ ಮಹತ್ವದ್ದು ಇಲ್ಲ, ಆಫೀಸಿಗೆ ಕೆಲಸ ವಿಲ್ಲ ಫೈಲ್ ಸಹ ಹೋಗುವುದಿಲ್ಲ, ಅಂತಹವರು ಹೆಚ್ಚಿನ ಖರ್ಚು ಮಾಡುತ್ತಿದ್ದಾರೆಂದು ಅದನ್ನು ತಡೆಗಟ್ಟುವುದಕ್ಕೆ ಏನಾದರೂ ಮಾಡುತ್ತೀರಾ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದುದು. ತಾವು ಅದನ್ನು ಬಿಟ್ಟು ೧೦ ಪೈಸೆಯಿದ್ದುದನ್ನು ಒಂದು ರೂಪಾಯಿ ಮಾಡಿದ್ದಾರೆ ಎಂದು ಹೇಳಿದರೆ ಸರಿಯಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಹೆಚ್ಚಾಗಿದೆಯೆಂದು ಹೇಳಿದರೆ ತಪ್ಪೇ, ಸುಳ್ಳೇ ?

ಶ್ರೀ ಎಸ್. ಬಂಗಾರಪ್ಪ.— ೧೯೮೭ರ ಮಾರ್ಚಿಯಿಂದ ೮೮ರ ಮಾರ್ಚಿವರೆಗೆ ವಿವರಗಳನ್ನು ಕೊಟ್ಟಿರತಕ್ಕಂತಹ ತಃಖ್ತೆ ಏನು ಇದೆ, ಆದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳದ್ದು ೧ ಲಕ್ಷ ೬೭,೦೦೦ ಚಿಲ್ಲರೆ ಇದೆ ನಿವಾಸ ೧,೩೨೦೦೦ ಚಿಲ್ಲರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರದ್ದು ಕಛೇರಿ ಎರಡು ಲಕ್ಷ ಚಿಲ್ಲರೆ,ನಿವಾಸ ಒಂದು ಲಕ್ಷ ಚಿಲ್ಲರೆ,ಮಾನ್ಯ ಬಸವಣ್ಣಪ್ಪನವರ ಕಛೇರಿಯಲ್ಲಿ ಹತ್ತಿರ ಎರಡು ಲಕ್ಷ ಟೆಲಿಫೋನ್ ಬಿಲ್ ಆಗಿದೆ, ಇನ್ನೂ ಅನೇಕ ಮಂತ್ರಿಗಳ ಟೆಲಿಫೋನ್ ವೆಚ್ಚವನ್ನು ಇಲ್ಲಿ ಕೊಟ್ಟಿದ್ದಾರೆ ಬೇರೆ ಬೇರೆ ಅಂಕಿ ಅಂಶಗಳು ಇಲ್ಲಿ ಇದೆ. ನಾನು ನೇರವಾಗಿ ಕೇಳುವುದು ಇಷ್ಟು. ಮಾನ್ಯ ಮುಖ್ಯ ಮಂತ್ರಿಗಳಿಗಿಂತ ಜಾಸ್ತಿ ಹಣ ಖರ್ಚುಮಾಡಿರತಕ್ಕಂತಹ ಸಚಿವರು ಈ ಪಟ್ಟಿಯಲ್ಲಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಮಾನ್ಯ ನಜೀರ್ ಸಾಬ್‌ರವರದ್ದು ಎರಡು ಲಕ್ಷ ಚಿಲ್ಲರೆ ಬರುತ್ತದೆ,ಇದು ಕಛೇರಿಯದು, ಆದರೆ ಮಾನ್ಯ ಮುಖ್ಯ ಮಂತ್ರಿಗಳ ಕಛೇರಿಯದ್ದು ೧,೬೭,೦೦೦ ಚಿಲ್ಲರೆ ಇದೆ. ಅದೇ ರೀತಿ ಮಾನ್ಯ ಬಸವಣ್ಣಪ್ಪನವರ ಕಛೇರಿಯದು ೧,೮೭,೦೦೦ ಚಿಲ್ಲರೆ ಇದೆ. ಹಾಗಾದರೆ ಇಲ್ಲಿ ಮಿತವ್ಯಯವನ್ನು ಹೇಗೆ ಮಾಡಿದ್ದೀರಿ ? ಮಾನ್ಯ ತುಂಗಳ್‌ರವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಮಿತವ್ಯಯದ ದೃಷ್ಟಿಯಿಂದ ಏನೂ ಕಡಿಮೆ ಮಾಡಿಲ್ಲ, ಮುಖ್ಯ ಮಂತ್ರಿಗಳಾಗಿ ತಾವು ಕರ್ನಾಟಕದಲ್ಲಿ ಹೆಚ್ಚಾಗಿ ಇಲ್ಲದೇ ಇರುವುದರಿಂದ ನೀವು ಹೆಚ್ಚು ಟೆಲಿಫೋನ್ ಅನ್ನು ಉಪಯೋಗ ಮಾಡುವುದಕ್ಕಾಗಿಲ್ಲ. ಮುಖ್ಯ ಮಂತ್ರಿಗಳು ಜಾಸ್ತಿ ಇಲ್ಲಿ ಇದ್ದಿದ್ದರೆ ಹೆಚ್ಚು ವೆಚ್ಚ ಬರಂತ್ತಿತ್ತು. ಅವರು ಅಲ್ಲಿಲ್ಲದಿದ್ದರೆ ಅಥವಾ ಯಾರೂ ಮಾಡದಿದ್ದರೆ ಆಟೋಮ್ಯಾಟಿಕ್ ಆಗಿ ಟೆಲಿಫೋನ್ ಬಿಲ್ ಕಡಿಮೆಯಾಗುತ್ತದೆ. ನೀವು ಕರ್ನಾಟಕದಲ್ಲಿ ಇಲ್ಲದಿರುವುದರಿಂದ ನಿಮ್ಮ ಕಛೇರಿ ಟೆಲಿಫೋನ್ ಬಿಲ್ ಕಡಿಮೆಯಾಗಿದೆ. ಇದಕ್ಕೆ ಬೇರೆ ಯಾವುದೇ ಕಾರಣವಿಲ್ಲ. ಆ ಕಾರಣವೇ ನಿಜ ಇರಬಹುದೇ ?

ಶ್ರೀ ರಾಮಕೃಷ್ಣ ಹೆಗಡೆ — ಇದೊಂದು ವಿಶೇಷವಾದ ಅರ್ಥ. ನಾನು ಕರ್ನಾಟಕದಲ್ಲಿ ಇಲ್ಲವೆಂದು ಇಟ್ಟುಕೊಳ್ಳಿ. ನಾನು ಎಲ್ಲಿದ್ದರೂ ಸಂಪರ್ಕ ಮಾಡಬೇಕಾಗುತ್ತದೋ ಇಲ್ಲವೋ ? ಇಲ್ಲಿಂದ ಮಾಡಿದರೆ ಇಲ್ಲಿಗೇ ಚಾರ್ಜ್ ಬೀಳುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಡೆಲ್ಲಿಯಲ್ಲಿ ಕೂತುಕೊಂಡು ಟೆಲಿಫೋನ್ ಮಾಡಿದರೆ ಅಲ್ಲಿಗೇ ಖರ್ಚು ಬರುತ್ತದೆ.

ಅಧ್ಯಕ್ಷರು.— ಮಾನ್ಯ ವೇದಾಂತ ಹೆಬ್ಬಿಗಯವರ ಪ್ರಶ್ನೆಗೆ ಸಚಿವರು ಕಾಲಾವಕಾಶ ಕೇಳಿದ್ದಾರೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದವರಿಂದ ಬಿಸ್ಕತ್ ವ್ಯಾಪಾರ

೧೬೦೧. ಶ್ರೀ ಎಸ್.ಎಂ. ಆಡ್ಯಂತಾಯ (ಸೂರತ್ಕಲ್).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಬಿಸ್ಕತ್ ವ್ಯಾಪಾರ ಮಾಡಲು ಉದ್ದೇಶಿಸಿರುವುದೇ ?

ಆ) ಹಾಗಿದ್ದಲ್ಲಿ ಈ ಬಿಸ್ಕತ್ ವ್ಯವಹಾರಕ್ಕೆ ತೊಡಗಿದ ಬಂಡವಾಳವೆಷ್ಟು ?

ಇ) ಕೆ.ಎಸ್.ಎಫ್.ಸಿ.ಎಸ್. ಬಿಸ್ಕತ್‌ನ ಸ್ವಯಂ ಉತ್ಪಾದನೆ ಮಾಡುತ್ತಿದೆಯೇ ಅಥವಾ ಖಾಸಗಿಯವರಿಂದ ಖರೀದಿಸಿತ್ತೆ ?

ಈ) ಈ ವ್ಯವಹಾರದಲ್ಲಿ ನಿಗಮಕ್ಕೆ ಆಗಿರುವ ಲಾಭ ನಷ್ಟವೆಷ್ಟು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಉದ್ದೇಶಿಸಲಾಗಿತ್ತು.

ಆ) ರೂ. ೨೪.೨೧,೫೫೬.೭೫

ಇ) ಖಾಸಗಿಯವರಿಂದ ಖರೀದಿಸಲಾಗಿತ್ತು.

ಈ) ಲಾಭವಾಗಲೀ ನಷ್ಟವಾಗಲೀ ಇರುವುದಿಲ್ಲ.

ಆದಾಯ ತೆರಿಗೆ ಹಾಗೂ ಅಬಕಾರಿ ಸುಂಕದಲ್ಲಿ

೧೬೦೫. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮಾಂತರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರವು ಪಡೆಯುತ್ತಿರುವ ಆದಾಯ ತೆರಿಗೆ (ಇನ್‌ಕಮ್ ಟ್ಯಾಕ್ಸ್) ಮತ್ತು ಅಬ್ಕಾರಿ ಸುಂಕ (ಎಕ್ಸೈಜ್ ಡ್ಯೂಟಿ)ದ ಪಾಲಿನ ಹಣದ ಮೊತ್ತವೆಷ್ಟು ? ಹಾಗೂ ಒಟ್ಟು ಆದಾಯದಲ್ಲಿ ಪಡೆಯುತ್ತಿರುವ ಪ್ರತಿಶತ ಹಣದ ಪ್ರಮಾಣವೆಷ್ಟು ?

ಆ) ಈ ಆದಾಯದಲ್ಲಿ ಶೇಕಡಾ ೧೦೦ ರಷ್ಟು ಹಣ ರಾಜ್ಯದಿಂದ ಪಾವತಿಯಾಗಬೇಕಿರುವ ಕಾರಣದಿಂದ ಸಂಪೂರ್ಣ ಮೊಬಲಗು ರಾಜ್ಯ ಸರ್ಕಾರಕ್ಕೆ ದೊರೆಯಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ ?

ಇ) ಒತ್ತಾಯಿಸಲಾಗಿದ್ದಲ್ಲಿ ಈ ಕುರಿತಂ ಕೇಂದ್ರ ಸರ್ಕಾರವು ತಾಳಿರುವ ನಿಲುವೇನು ?